ಯಾವುದೇ ಸಂಸ್ಥೆಯು ಸರ್ವಸದಸ್ಯರ ಸಭೆಯನ್ನು ನಡೆಸದಿದ್ದರೆ ಆಗ ಸಂಸ್ಥೆಯನ್ನು ನವೀಕರಿಸುವುದು ಸಾಧ್ಯವಿಲ್ಲ.

ಪಟ್ಟಿಯನ್ನು ಒದಗಿಸಲು 15 ದಿನಗಳ ಕಾಲಾವಕಾಶ ಕೋರಲಾಗಿದೆ.

ಶಿವಮೊಗ್ಗ ವಿಧಾನಸಭಾ ಕ್ಷೇತ್ರದಲ್ಲಿ ರಾಷ್ಟ್ರೀಯ ಹೆದ್ದಾರಿ ರಸ್ತೆ ಡಾಂಬರೀಕರಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 717(329)

ಸದಸ್ಯರ ಹೆಸರು : ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ(ಶಿವಮೊಗ್ಗ)

ಉತ್ತರಿಸುವ ಸಚಿವರು : ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು)

ಪ್ರಶ್ನೆ

ಅ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಕಿಲೋಮೀಟರ್ ರಾಷ್ಟ್ರೀಯ ಹೆದ್ದಾರಿ ರಸ್ತೆ ಡಾಂಬರೀಕರಣ ಮಾಡಲಾಗಿದೆ? ಇದುವರೆವಿಗೂ ಖರ್ಚು ಮಾಡಿದ ಹಣವೆಷ್ಟು? ವಿವರ ನೀಡುವುದು.

ಉತ್ತರ

ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದಲ್ಲಿ ರಾಷ್ಟ್ರೀಯ ಹೆದ್ದಾರಿ-13 (ಸೊಲ್ಲಾಪುರ-ಮಂಗಳೂರು ರಸ್ತೆ) ಕಿ.ಮೀ.519 ರಿಂದ 551ರವರೆಗೆ (32 ಕಿ.ಮೀ) ಮತ್ತು ರಾಷ್ಟ್ರೀಯ ಹೆದ್ದಾರಿ 206(ತುಮಕೂರು-ಹೊನ್ನಾವರ ರಸ್ತೆ) ಕಿ.ಮೀ. 197 ರಿಂದ 248ರವರೆಗೆ (51 ಕಿ.ಮೀ.), ಒಟ್ಟು 83 ಕಿ.ಮೀ. ಹಾಯ್ದು ಹೋಗುತ್ತವೆ.

ಇದರಲ್ಲಿ ರಾ.ಹೆ. 206ರ ವಾಹನ ಸಂಚಾರ ಪಥವನ್ನು ರೂ.387 ಲಕ್ಷ ವೆಚ್ಚ ಮಾಡಿ 32 ಕಿ.ಮೀ. ಅಭಿವೃದ್ಧಿಪಡಿಸಲಾಗಿದೆ. ವಿವರಗಳು ಈ ಕೆಳಗಿನಂತಿವೆ.

ರಾಷ್ಟ್ರೀಯ ಹೆದ್ದಾರಿ 206ರ ಅಭಿವೃದ್ಧಿಗೆ

1. 1999-2000ನೇ ಸಾಲಿನಲ್ಲಿ ಕಿ.ಮೀ. 197 ರಿಂದ 206 ರವರೆಗೆ (9 ಕಿ.ಮೀ.) ಆಗಿರುವ ವೆಚ್ಚ ರೂ.110.00 ಲಕ್ಷಗಳು.

2. 1999-2000ನೇ ಸಾಲಿನ ಕಿ.ಮೀ.245 ರಿಂದ 248 ರವರೆಗೆ (3 ಕಿ.ಮೀ.) ಆಗಿರುವ ವೆಚ್ಚ ರೂ.22.00 ಲಕ್ಷಗಳು

3. 2000-01ನೇ ಸಾಲಿನಲ್ಲಿ ಕಿ.ಮೀ.209 ರಿಂದ 229ರವರೆಗೆ (20 ಕಿ.ಮೀ.) ತಗುಲಿದ ವೆಚ್ಚ ರೂ.255.00 ಲಕ್ಷಗಳು.

ರಾಷ್ಟ್ರೀಯ ಹೆದ್ದಾರಿ 13ರ ಅಭಿವೃದ್ಧಿಗೆ

2001-02ನೇ ಸಾಲಿನಲ್ಲಿ 17.30 ಕಿ.ಮೀ.ಗಳ ಅಭಿವೃದ್ಧಿಗೆ 245.18 ಲಕ್ಷ ರೂ. ಅಂದಾಜು ಮಂಜೂರಾಗಿದ್ದು ಕಾಮಗಾರಿ ಪ್ರಗತಿಯಲ್ಲಿದೆ.

ಶಿವಮೊಗ್ಗ ನಗರದ ಪರಿಮಿತಿಯಿಂದ ಬಗರ್ ಹುಕುಂ ಜಮೀನು ಸಕ್ರಮೀಕರಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 719(331)

ಸದಸ್ಯರ ಹೆಸರು : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ)

ಉತ್ತರಿಸುವ ಸಚಿವರು : ಶ್ರೀ ಹೆಚ್.ಸಿ.ಶ್ರೀಕಂಠಯ್ಯ(ಕಂದಾಯ ಸಚಿವರು)

ಪ್ರಶ್ನೆ

ಅ) ಶಿವಮೊಗ್ಗ ನಗರದ ಪರಿಮಿತಿಯಿಂದ ಬಗರ್ ಹುಕುಂ ಜಮೀನು ಸಕ್ರಮೀಕರಣದ ಮಿತಿಯನ್ನು 2 ಕಿಲೋಮೀಟರ್ ಇಳಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ? (ವಿವರ ನೀಡುವುದು)

ಉತ್ತರ

ಅ) ಇಲ್ಲ.

ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಅಭಿವೃದ್ಧಿ ಹಾಗೂ ಡಾಂಬರೀಕರಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 720(332)

ಸದಸ್ಯರ ಹೆಸರು : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ)

ಉತ್ತರಿಸುವ ಸಚಿವರು : ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು)